ಮೂಲ ದಾವಾ ನಂಃ 30/2019

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **17-08-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ವಿ.ಟಿ.ವಾಯ್ ವಕೀಲರಿಂದಃ**

ಸದರಿ ದಾವಾ ಸ್ಥಳದಲ್ಲಿ ನನ್ನ ತಂದೆ ತೀರಿಕೊಂಡ ನಂತರ ನಾವು ಸಾಗುವಳಿಯನ್ನು ಮಾಡಿದ್ದು ಇರುವುದಿಲ್ಲ. ದಾವಾ ಸ್ಥಳಗಳು ಕೃಷಿ ಜಮೀನಾಗಿದ್ದು,ನಾವು ಸದರಿ ಸ್ಥಳಗಳಲ್ಲಿ ವಾಸ್ತವ್ಯ ಮಾಡಿದ್ದು ಇರುವುದಿಲ್ಲ. ತೊಂಡಿ ವಾಂಟಣಿ ನನ್ನ ತಂದೆಯ ಕಾಲದಿಂದಲೂ ಮಾಡಿಕೊಂಡು ಬಂದ್ದದ್ದು ಇರುತ್ತದೆ.

2 ಮತ್ತು 6 ನೇ ಪ್ರತಿವಾದಿಯರು 5 ನೇ ಪ್ರತಿವಾದಿಯ ಸಹೋದರರು ಎಂದರೆ ಸರಿ. ನಾವು ವಂಶಾಳಿಯಲ್ಲಿ ಅವರನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಗಣಪತಿ ಮಂಜುನಾಥ ನಾಯ್ಕರವರನ್ನು ದಾವೆಯಲ್ಲಿ ತೋರಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ.

1 ಮತ್ತು 11 ನೇ ಪ್ರತಿವಾದಿಯರು 2020-21 ನೇ ಸಾಲಿನಲ್ಲಿ ತೀರಿಕೊಂಡಿದ್ದಾರೆ , ಆದರೆ ಅದು ಯಾವ ದಿನಾಂಕವೆಂದು ಸ್ಪಷ್ಟವಾಗಿ ನನಗೆ ಗೊತ್ತಿಲ್ಲ. 22 ನೇ ಪ್ರತಿವಾದಿಯು ಜೀವಂತವಿದ್ದಾರೆ. 11 ನೇ ಪ್ರತಿವಾದಿಯ ಸರಳ ವಾರಿಸುದಾರರ ಕುರಿತಾಗಿ ಯಾವುದೇ ದಾಖಲೆ ಇಲ್ಲದೇ ಇರುವುದರಿಂದ ಅವರನ್ನು ದಾವೆಯಲ್ಲಿ ಸೇರಿಸಿಲ್ಲ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ.

1 ನೇ ಪ್ರತಿವಾದಿಯ ವಾರಸುದಾರರ ಬಗ್ಗೆ ನಮ್ಮ ವಕೀಲರ ಮುಂದೆ ನಾನು ಮಾಹಿತಿಯನ್ನು ನೀಡಿದ್ದೇನೆ. ಅವರ ವಾರಸುದಾರರನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. 1 ಮತ್ತು 11 ನೇ ಪ್ರತಿವಾದಿಗೆ ವಾರಿಸುದಾರರಿದ್ದಾರೆ ಎಂದರೆ ಸರಿ. ಐ.ಆರ್.ಬಿ ಅವರು ನನಗೆ ನೋಟಿಸ್ಸನ್ನು ನೀಡಿದ್ದು ಇರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.